**ಸಿ.ಸಿ.ನಂ.2171/2021**
**ಸಿಡಬ್ಲ್ಯು: 04 ಪಿಡಬ್ಲ್ಯು:04**

**ಮೇ: 1 ನೇ ಹೆಚ್ಚುವರಿ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ ಬ-ಬಾಗೇವಾಡಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ಶರಪ್ಪ ಕರಾಬಿ |
| ತಂದೆ/ಗಂಡ ಹೆಸರು | : | ನಾಗಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಮನಗೂಳಿ |

**ಸಾಕ್ಷಿಯನ್ನು ಇಂದು ದಿನಾಂಕ: 06-06-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ**

1) ಈ ಪ್ರಕರಣ ಕುರಿತು ಯಾವುದೇ ಮಾಹಿತಿ ಇಲ್ಲ. ಆರೋಪಿ ಪರಿಚಯ ಇಲ್ಲ. ನಾನು ಪ್ರಕರಣಕ್ಕೆ ಸಂಭಂದಿಸಿದಂತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ. ನನ್ನ ಸಮಕ್ಷಮ ಯಾವುದೇ ವಾಹನ ಅಮಾನತು ಪಡಿಸಿಕೊಂಡಿಲ್ಲ.

2) ಈಗ ನಾನು ನೋಡುತ್ತಿರುವ ದಾಖಲೆ ಪಂಚನಾಮೆ ಆಗಿದ್ದು, ಅದನ್ನು ನಿಪಿ-13 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

3) ಈಗ ನಾನು ನೋಡುತ್ತಿರುವ ದಾಖಲೆ ವಾಹನ ತಡೆ ಪಂಚನಾಮೆ ಆಗಿದ್ದು, ಅದನ್ನು ನಿಪಿ-14 ಎಂದು ಗುರುತಿಸಲಾಗಿದ್ದು, ಅದರ ಮೇಲೆ ಸಾಕ್ಷಿ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ರವರರಿಂದ**

4) ದಿ:01-04-2021 ರಂದು ನನ್ನನ್ನು ಪೋಲಿಸರು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಎನ್ ಎಚ್ -50 ರಸ್ತೆಯ ಪೂರ್ವದ ಕಡೆ ಹೈವೆ ಮೇಲೆ ರಸ್ತೆ ಇದೆ ಎಂದರೆ ಸರಿಯಲ್ಲ. ಸದರಿ ಹೈವೆ ದಕ್ಷಿಣೋತ್ತರ ಪೂರ್ವ ಪಶ್ಚಿಮ ಅಗಲ ಇರುತ್ತದೆ ಎಂದರೆ

ಸರಿಯಲ್ಲ.  ಹೈವೆ 4 ಪತ ರಸ್ತೆ ಇದ್ದು ಪೂರ್ವಕ್ಕೆ ಆಲಮಟ್ಟಿ ಹೋಗುವ ರಸ್ತೆ ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ವಿಜಯಪುರ ರಸ್ತೆ ಇದೆ ಎಂದರೆ ಸರಿಯಲ್ಲ. ಜಾಗೆಯಿಂದ ದಕ್ಷಿಣಕ್ಕೆ 100 ಮೀಟರ ರಸ್ತೆ ಮೇಲೆ ಒಂದು ಕಲ್ಲಿನ ಮೆಲೆ ಚಿತ್ತದುರ್ಗ 330 ಕಿ.ಮೀ ಕಲ್ಲು ಇದೆ ಅಂತಾ ಬರೆದಿದೆ ಎಂದರೆ ಸರಿಯಲ್ಲ. 200 ಮೀಟರ ಕಡೆ ನಿಸಾರ ಪೆಟ್ರೋಲ ಪಂಪ ಇರುತ್ತದೆ ಎಂದರೆ ಸರಿಯಲ್ಲ. ಹೈವೆ ರಸ್ತೆ ಮೇಲೆ ಡಿಸಾಯಿಲ ಬಿದ್ದಿದ್ದು ಅದು ಒಣಗಿದ್ದು ಇದೆ ಎಂದರೆ ಸರಿಯಲ್ಲ. ಇದೇ ಜಾಗೆಯಲ್ಲಿತನ್ನ ಲಾರಿ ಚಾಲಕ ಮುಕುಂದಾ ಗೋಡಕೆ ಲಾರಿ ರಸ್ತೆ ಮೇಲೆ ನಿರ್ಲಕ್ಷತನದಿಂದ ನಿಲ್ಲಿಸಿ ಎಂದರೆ ಸರಿಯಲ್ಲ. ಕಾರಿನ ಚಾಲಕ ಹಿಂದಿನಿಂದ ಹಾಯಿಸಿ ಅಪಘಾತ ಮಾಡಿದ್ದಾ ಎಂದರೆ ಸರಿಯಲ್ಲ. ಇದೆ ಜಾಗ ಅಂತಾ ಹೇಳಿದ್ದು ನೋಡಿದ್ದೆ ಎಂದರೆ ಸರಿಯಲ್ಲ. ಈ ಜಾಗೆಯ ಪೂರ್ವಕ್ಕೆ ಜೋತಿಬಾ ದೊಂಡಿಬಾ ಜಾಧವ ಜಮೀನು ಇದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕೆ ಅಪ್ಪಾಸಿ ಬಿತ ಅವರ ಜಮೀನು ದಕ್ಷಿಣೋತ್ತರ ಇದೆ ಎಂದರೆ ಸರಿಯಲ್ಲ. ಎನ ಎಚ್ -50 ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಸದರ ಪಂಚನಾಮೆಯನ್ನು ಸ್ಥಳದಲ್ಲಿ ಕುಳಿತು ಸಾಯಾಂಕಾಲ 3.45 ರಿಂದ 4.45 ರವರೆಗೆ ಪಂಚನಾಮ ಮಾಡಿದ್ದೇವೆ ಎಂದರೆ ಸರಿಯಲ್ಲ.  ಪಂಚನಾಮೆ ಬರೆಸಿ ಹೇಳಿದ್ದೆ ಎಂದರೆ ಸರಿಯಲ್ಲ.

5) ದಿ:01-04-2021 ರಂದು ಮನಗೂಳಿ ಬಸ್ಸ ನಿಲ್ದಾಣದಲ್ಲಿ ಇದ್ದಾಗ ಮನಗೂಳಿ ಪಿ.ಎಸ್.ಐ ನಮ್ಮನ್ನು ಕರೆದು ಒಂದು ಮನಗೂಳಿ ಗುನ್ನಾ ನಂ.41/2021 ನೇದ್ದರಲ್ಲಿ ವಾಹನಗಳ ಎನ್, ಎಚ್-50 ನಿಸಾರ ಪೆಟ್ರೋಲ ಪಂಪ ಹತ್ತಿರ ಮನಗೂಳಿ ಯಿಂದ ಸುಮಾರು 2-3 ಕಿ.ಮೀ ಅಂತರದಲ್ಲಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ಕಾರ ನಂ.KA-35/P-8766 ನೇದ್ದರ ಚಾಲಕ ಆರೋಪಿ ನಂ.1 ಹೆಚ್ಚಿನ ಚಿಕಿತ್ಸೆಗಾಗಿ ಕೆ.ಎಲ್.ಈ ಬೆಳಗಾವಿಗೆ ಹೋದಾಗ ಗುಣಮುಖವಾಗದೇ ದಿ:31-03-2021 ರಂದು ರಾತ್ರಿ 8.30 ಗಂಟೆ ಸುಮಾರಿಗೆ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತಕ್ಕೆ ಸಂಭಮದಿಸಿದಂತೆ ಪಂಚನಾಮೆ ಮಾಡಲು ಪೋಲಿಸರು ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಠಾಣೆಯ ಹಿಂದಿನಿಂದ ಬಾಗಿಲು ಪಶ್ಚೀಮ ದಿಕ್ಕಿಗೆ ಮಾರುತಿ ಕಂಪನಿಯ swift ಕಾರ ನೊಂದಣಿ ಸಂ.KA-35/B-8766 ಅಂತಾ ಇತ್ತು ಎಂದರೆ ಸರಿಯಲ್ಲ. ಸದರಿ ವಾಹನದ ಮುಂದಿನ ಭಾಗ ಡ್ಯಾಮೇಜ ಆಗಿತ್ತು ಎಂದರೆ ಸರಿಯಲ್ಲ. ಠಾಣಾ ಹಿಂದಿನ ಭಾಗಕ್ಕೆ ಪೂರ್ವಕ್ಕೆ ನಿಲ್ಲಿಸಿ ಅಶೋಕ ಲೈಲೆಂಡ ಒಂದು 12 ಚಕ್ರ ವಾಹನ ನೊಂದಣಿ MH-13/CU-3022 ಅಂತಾ ಇತ್ತು ಎಂದರೆ ಸರಿಯಲ್ಲ. ಕೆಂಪು ಬಣ್ಣದ ಚಾಲು ಸ್ಥಿತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ಅದರ ಹಿಂದಿನ ಬಾಗ ಜಕಂ ಆಗಿತ್ತು ಎಂದರೆ ಸರಿಯಲ್ಲ. ಈ ಮೇಲ್ಕಾಣಿಸಿದ ವಾಹನ ತಡೆ ಹಿಡಿದ ಜಾಗ ಉತ್ತರಕ್ಕೆ ಠಾಣೆ ಆವರಣ

ಪೂರ್ವ ಪಶ್ಚಿಮ ಮನಗೂಳಿ ಬ.ಬಾಗೇವಾಡಿ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಪೂರ್ವಕ್ಕೆ ಠಾಣಾ ಆವರಣ  ಇರುತ್ತದೆ ಎಂದರೆ ಸರಿಯಲ್ಲ. ಪಶ್ಚಿಮಕ್ಕ ಠಾಣೆ ಇರುತ್ತದೆ ಎಂದರೆ ಸರಿಯಲ್ಲ ನನ್ನ ಸಮಕ್ಷಮ ಹಾಜರು ಇದ್ದು ನೋಡಿ ಹೇಳಿ ಕೇಳಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಸಂಜೆ 5.00 ರಿಂದ 5.30 ಗಂಟೆವರೆಗೆ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಇಲ್ಲ ಅಂತಾ ಸೂಚಿಸಿರುತ್ತಾರೆ.**

**ಮರುವಿಚಾರಣೆ ಇಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಒಂದನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ., ಬಸವನ ಬಾಗೇವಾಡಿ.